

### ಬಿಡುಗಡೆ ಯಾರಿಗೆ?

‘ಬಿಡುಗಡೆ’ (ಜೂ.08, ಸಂತೆಬೆನ್ನೂರು ಫೈಜ್ನಟ್ರಾಜ್) ಕಥೆ ಚೆನ್ನಾಗಿದೆ. ಬಿಡುಗಡೆ ಯಾರಿಗೆಂದು ಅರ್ಥವಾಗಲಿಲ್ಲ, ಆಗುವುದೂ ಬೇಕಿಲ್ಲ. ಕೆಲವರ ಬದುಕೇ ಹಾಗೆ. ಕಥೆ ಓದುತ್ತಾ ಎಲ್ಲ ಪಾತ್ರಗಳು ಕಣ್ಣಮುಂದೆ ಬಂದಂತಾದವು. ಮೂಡಲಗಿರಿಯಪ್ಪನ ಪರಿಸ್ಥಿತಿ ಸಾಕಷ್ಟು ವಿಚಾರಗಳನ್ನು ಹೇಳುವಂತಿತ್ತು.

–ಅನ್ನಪೂರ್ಣ ಪದ್ಮಸಾಲಿ, ಕೊಪ್ಪಳ

### ನಟನಿಗೆ ಅಕ್ಷರದ ನಮನ

‘ಮಂದಸ್ಮಿತ ನಟನ ಕಾಡುವ ನೆನಪು’ (ಜೂ.08, ವಿಶಾಖ ಎನ್.) ಲೇಖನ ಅಗಲಿದ ಸಂಭಾವಿತ ನಟನಿಗೆ ಮನೋಜ್ಞ ಶ್ರದ್ಧಾಂಜಲಿ ಸಮರ್ಪಿಸಿದಂತಿದೆ. ಶರತ್‌ಬಾಬು ಅವರ ಮಂದಸ್ಮಿತ ಚಿತ್ರದೊಂದಿಗೆ ಅವರ ವ್ಯಕ್ತಿ ವೈಶಿಷ್ಟ್ಯ ಹಾಗೂ ವೃತ್ತಿ ಘನತೆಯನ್ನು ಯಾವ ಆಡಂಬರವೂ ಇಲ್ಲದೆ ನಿರೂಪಿಸುವ ಮೂಲಕ ಗೌರವ ಸಂದಿದೆ.

–ಶಂಕರ್ ಸೊರವನಹಳ್ಳಿ, ಮಾಯಸಂದ್ರ

### ಶರತ್‌ಬಾಬು ನೆನಪು

1984ರಲ್ಲಿ ತೆರೆಕಂಡ ‘ತುಳಸಿದಳ’ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಿತರಾದ ಶರತ್ ಅವರು ಕನ್ನಡದ ಒಟ್ಟು 14 ಚಿತ್ರಗಳಲ್ಲಿ ನಟಿಸಿದರು. 9 ಬಾರಿ ಆಂಧ್ರ ಸರ್ಕಾರ ಕೊಡುವ ‘ನಂದಿ’ ಪ್ರಶಸ್ತಿಗೆ ಭಾಜನರಾಗಿದ್ದರು. ಚಿತ್ರೀಕರಣ ನಡೆಯುತ್ತಿದ್ದಾಗ ನಿಂಬೆಹಣ್ಣಿನ ಶರಬತ್ ಹೆಚ್ಚು ಕುಡಿಯುತ್ತಿದ್ದರು. ಹೀಗಾಗಿ ಕೆಲವರು ಅವರಿಗೆ ಶರಬತ್ ಬಾಬು ಎಂದೇ ಕರೆಯುತ್ತಿದ್ದರು.

–ಮುಕುಂದ ಹೆರಕಲ್ಲ, ಬೆಂಗಳೂರು

### ಜೀವವಿಕಾಸದ ಚಾಲನಾ ಶಕ್ತಿ

‘ಜೀವ ಜಗತ್ತಿನ 3 ಅದ್ಭುತಗಳು’ (ಜೂ.01, ಕೆ.ಎನ್. ಗಣೇಶಯ್ಯ) ಓದಿ ನನಗೆ ತಿಳಿದಿರುವ ವಿಕಾಸವಾದದ ಮೂಲ ಸ್ವರೂಪದ ಬಗ್ಗೆಯೇ ಗೊಂದಲವಾಯಿತು. ಲೇಖಕರು ವಿಕಾಸವಾದಕ್ಕೆ ಯಾವುದೇ ನೈತಿಕ ದಿಕ್ಕು ಇಲ್ಲ ಎಂಬುದನ್ನು ಉದ್ಧರಿಸುತ್ತಲೇ ವಿಕಾಸವಾದದ ಅಂತ್ಯದಲ್ಲಿ (ಸಾರ್ಥಕ ಅಂತ್ಯ?) ಪ್ರಶ್ನೆಯನ್ನು ತಂದು ನಿಲ್ಲಿಸುವ ಪ್ರಯತ್ನ ಮಾಡಿದ್ದಾರೆ. ಒಂದು ವೇಳೆ ಆದಿ ಏಕಕೋಶ ಜೀವಿಯಿಂದ ವಿಕಾಸವನ್ನು ಪುನರಾವರ್ತಿಸಲು ಸಾಧ್ಯವಾದರೆ ಪ್ರತಿ ಪುನರಾವರ್ತನೆಯಲ್ಲೂ ಮನುಷ್ಯ ಅಥವಾ ಮನುಷ್ಯನಷ್ಟೇ ಪ್ರಜ್ಞಾವಂತ ಜೀವಿಯ ಸೃಷ್ಟಿಯ ಸಾಧ್ಯತೆ ಎಷ್ಟು? ವಿಕಾಸವಾದದ ಪರಿಣತರೇ ಹೇಳುವಂತೆ ಇಂತಹ ಸಾಧ್ಯತೆ ಮಿಲಿಯನ್‌ಗಳಲ್ಲಿ ಒಂದು. ಭೂಮಿಯಲ್ಲಿ ಜೈವಿಕ ವಿಕಾಸದ ಚಾಲನಾ ಶಕ್ತಿ ಭೂ ಪರಿಸರದ ನಿರಂತರ ಸ್ಥಿತ್ಯಂತರದ್ದು. ಈ ಅಪ್ರಜ್ಞಾವಂತ ಅಜೈವಿಕ ಪ್ರಕ್ರಿಯೆ ಯಾವ ರೀತಿ ಕೂಡಿ ಬಂದರೆ ವಿಕಾಸವು ಪ್ರಜ್ಞಾವಂತ ಜೀವಿಯನ್ನು ಸೃಜಿಸುತ್ತದೆ? ಪ್ರಕೃತಿಯ ವಿದ್ಯಮಾನಗಳನ್ನು ಮನುಷ್ಯ ಕೇಂದ್ರಿತ ದೃಷ್ಟಿಯಿಂದ ಅರ್ಥೈಸುವ ಗಾರುಡಿಗೆ ಲೇಖಕರು ತಲೆದೂಗಿರುವುದು ಎದ್ದು ಕಾಣುತ್ತಿದೆ.

–ಡಾ. ನರೇಂದ್ರ ಎನ್., ತುಮಕೂರು

### ಪದಬಂಧ ಗೊಂದಲ

ಜೂನ್ 8ರ ಪದಬಂಧದಲ್ಲಿ ಒಂದು ಉತ್ತರ ಗೊಂದಲದಿಂದ ಕೂಡಿದೆ. ಎಡದಿಂದ ಬಲಕ್ಕೆ 10ರ ಕಾಲಂ ಉತ್ತರ ‘ಸುಲಭ’ ಎಂದಿದೆ. ಭ ಇರುವ ಜಾಗದಲ್ಲೇ 14 ಅಡ್ಡಕ್ಕೆ ‘ಮಲೆಪು’ ಎಂಬ ಉತ್ತರವಿದೆ. ಭ ಮತ್ತು ಮ ಎರಡೂ ಅಕ್ಷರಗಳಿಗೂ ಒಂದೇ ಜಾಗ ಹೇಗೆ ಸಾಧ್ಯ?

–ಅರುಣ್ ಕೆ.ಎನ್., ಬೆಂಗಳೂರು

ಮೇಲಿನಿಂದ ಕೆಳಕ್ಕೆ 10ರ ಉತ್ತರ ‘ಸುಗಮ’ ಎಂದಿರಬೇಕಿತ್ತು; ಅದು ‘ಸುಲಭ’ ಎಂದಾಗಿದೆ.

–ಎನ್. ವಾಸುದೇವ್

### ‘ಸುವರ್ಣ ಸಂಪುಟ’ದಲ್ಲಿ ಕಾಣದ್ದು...

‘ಹಸಿರು ಸಂಪುಟ...’ (ಜೂ.08, ಗುರುರಾಜ್ ಎಸ್. ದಾವಣಗೆರೆ) ಮುಖಪುಟ ಲೇಖನ ಬಹುಮುಖ್ಯ ಹಸಿರು ಹೋರಾಟದ ದಾರಿಯನ್ನು ತೆರೆದಿಟ್ಟಿದೆ. ಕರ್ನಾಟಕದ, ಅದರಲ್ಲೂ ಉತ್ತರ ಕನ್ನಡದಲ್ಲಿ ನಡೆದ ಪರಿಸರ ಹೋರಾಟಗಳ ಬಗ್ಗೆ ವಿವರವಾಗಿ ಹೇಳಲಾಗಿದೆ. ಆದರೆ ಅದರಲ್ಲಿ ಕಾಳಿನದಿಗೆ ಅಡ್ಡಲಾಗಿ ಕೊಡಸಳ್ಳಿಯಲ್ಲಿ ನಿರ್ಮಿಸಿದ ಅಣೆಕಟ್ಟಿನ ಬಗ್ಗೆ, ಅದರ ವಿರುದ್ಧ ನಡೆದ ತೀವ್ರ ಚಳವಳಿ ಬಗ್ಗೆ ಪ್ರಸ್ತಾಪವೇ ಇಲ್ಲದಿರುವುದು ಅಚ್ಚರಿ ಹುಟ್ಟಿಸಿತು. ಕೊಡಸಳ್ಳಿ ಅಣೆಕಟ್ಟು ಯೋಜನೆ ವಿರುದ್ಧ ಅಲ್ಲಿನ ಸಂತ್ರಸ್ತರು ನಡೆಸಿದ ಹೋರಾಟ, ಆ ಹೋರಾಟದ ದಾರಿಯಲ್ಲಿಯೇ ಮಡಿದ ಶಂಕರ ಭಾಗವತರ ಬಲಿದಾನದ ಬಗ್ಗೆ, ಕರ್ನಾಟಕದ ಪರಿಸರ ಹೋರಾಟಗಳ ಚರ್ಚೆಗಳಲ್ಲಿ ಮರೆಯುವುದು ಹೊಸದೇನೂ ಅಲ್ಲ. ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ಅಷ್ಟೇ ಅಲ್ಲ, ಲೇಖನದಲ್ಲಿ ಉಲ್ಲೇಖಿತವಾದ ಬೇಡ್ತಿ ಚಳವಳಿಯ ಮುಂದಾಳತ್ವ ವಹಿಸಿದ್ದ ಸ್ವರ್ಣವಲ್ಲಿ ಶ್ರೀಗಳು, ಸರಿಸುಮಾರು ಅದೇ ಸಮಯದಲ್ಲಿ ತೀವ್ರತರವಾಗಿ ನಡೆಯುತ್ತಿದ್ದ ಕೊಡಸಳ್ಳಿ ಯೋಜನೆ ವಿರುದ್ಧದ ಪ್ರತಿಭಟನೆ ಬಗ್ಗೆ ಮೌನವಾಗಿದ್ದುದೂ ಇತಿಹಾಸದ ಪುಟಗಳಲ್ಲಿ ದಾಖಲಾಗಲೇಬೇಕಾದ ಸಂಗತಿ.

–ಪದ್ಮನಾಭ ಭಟ್, ಶೇವ್ಕಾರ

### ‘ಸುಧಾ’ ಹಸಿರು ಗಿಡದಂತೆ ಕಂಡಿತು

ಹಸಿರು ಹೋರಾಟಗಳ ಅವಲೋಕನ ಚೇತೋಹಾರಿ ಸಂಕಥನ. ಸಂಗ್ರಾಹ್ಯ ಸಂಚಿಕೆ. ಗಿಡವೊಂದನ್ನು ಕೈಯಲ್ಲಿ ಹಿಡಿದ ಅನುಭವವನ್ನು ‘ಸುಧಾ’ ನೀಡಿತು.

–ಸುಬ್ಬು ಹೊಲೆಯಾರ್, ಬೆಂಗಳೂರು

### ಹಸಿರು ಹಬ್ಬದ ವೈಶಿಷ್ಟ್ಯ

ಪರಿಸರ ದಿನದ ವಿಶೇಷ ಸಂಚಿಕೆ ‘ಹಸಿರು ಹಬ್ಬ’ದ ಮುಖಪುಟ ಲೇಖನ, ಸಂಪಾದಕೀಯ, ಪ್ರತಿ ಲೇಖನದಲ್ಲೂ ಪರಿಸರಪ್ರೀತಿ ಪ್ರತಿಫಲಿಸುತ್ತಿದೆ.



ವಿಶ್ವ ಪರಿಸರ ದಿನದ ಸಂದರ್ಭ, ಸಮಗ್ರ ಮಾಹಿತಿ ಹೊತ್ತ ಮುಖಪುಟ ಲೇಖನ ಸಮಯೋಚಿತವಾಗಿದೆ. ಮುಖಪುಟ ಚಿತ್ರ ಕೂಡ ಅರ್ಥಬದ್ಧವಾಗಿದೆ.

–ಆಶಾ ಸಂಜೀವ ಗೌರ, ಹಾಸನ

–ಶ್ರುತಿ ರಿಗ್ರೆಟ್ ಅಯ್ಯರ್, ಅಮೆರಿಕ

### ಆತ್ಮಾವಲೋಕನಕ್ಕೆ ಪ್ರೇರಣೆ

ಪರಿಸರ ಸಂಚಿಕೆಯಲ್ಲಿ, ಕರ್ಕಿ ಕೃಷ್ಣಮೂರ್ತಿಯವರ ‘ಹಸಿರು ಕಟ್ಟಡಗಳಲ್ಲಿ ಹಸಿರಿನ ಬೆಲೆ’ ಲೇಖನ ಅಕ್ಷರಶಃ ಖಡ್ಗ ಝಳಪಿಸುತ್ತಿರುವಂತಿದೆ. ಕಟುಸತ್ಯವನ್ನು ನಿಷ್ಠುರವಾಗಿ ಹೇಳಿರುವ ಈ ಲೇಖನ, ಆತ್ಮಾವಲೋಕನಕ್ಕೆ ಪ್ರೇರೇಪಿಸುತ್ತದೆ. ಎಲ್ಲ ಬರಹಗಳು ‘ಸುಧಾ’ ಪರಿಸರ ಕಾಳಜಿಯ ಅಂತಃಕರಣವನ್ನು ಎತ್ತಿಹಿಡಿದಿವೆ.

–ವಿನು ಗಂಗೆ

### ಕಹಿಸತ್ಯದ ಅನಾವರಣ

ಕರ್ಕಿ ಕೃಷ್ಣಮೂರ್ತಿಯವರ ‘ಹಸಿರಿನ ಹಿಂದೆ’ ಲೇಖನ ಬಹಳ ಚೆನ್ನಾಗಿದೆ. ಕಾರ್ಪೊರೇಟ್ ಕಂಪನಿಗಳ ವಿರುದ್ಧಾತ್ಮಕ ಧೋರಣೆಗಳನ್ನು ತೆರೆದಿಟ್ಟಿದ್ದಾರೆ. –ಉಷಾ ಸೋಗಲ್

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in